


ಕೋಟೆ ಮಾದರಿಯ ಸುರಪುರ ಬಸ್‌ನಿಲ್ದಾಣ

## ಸುರಪುರ ಸೀಮೆಯ ಸಾಂಸ್ಕೃತಿಕ ಸಿರಿ

# ಉರ್ದು–ಕನ್ನಡ ಸಮನ್ವಯ ಮಾದರಿ

**ಯಾದಗಿರಿ ಜಿಲ್ಲೆಯ ಸುರಪುರ ಬರಿಯ ಊರಲ್ಲ; ಅದು ಈ ನಾಡಿನ ಬಹುತ್ವ ಪರಂಪರೆಯನ್ನು ರೂಢಿಸಿಕೊಂಡಿರುವ ವಿಶಿಷ್ಟ ಮಾದರಿ. ಚಾರಿತ್ರಿಕ–ಸಾಂಸ್ಕೃತಿಕ ಮಹತ್ವ ಹೊಂದಿರುವ ಸುರಪುರ, ವರ್ತಮಾನದಲ್ಲಿ 'ಕನ್ನಡ ಸಿರಿ'ಯ ಪುರವೂ ಹೌದು.**

■ ಮಲ್ಲಿಕಾರ್ಜುನ ಕಡಕೋಳ

ತಿಮ್ಮಾಪುರ, ರಂಗಂಪೇಟ, ಸತ್ಯಂಪೇಟ, ರುಕ್ಮಂಪೇಟ, ದೇವಳಗುಡ್ಡ, ಹಸನಾಪುರ – ಈ ಊರುಗಳು ಸುರಪುರದ ಸುತ್ತಮುತ್ತ ದ್ರಾಕ್ಷಿ ಗೊಂಚಲಿನಂತೆ ಹಬ್ಬಿಕೊಂಡ ಹಳ್ಳಿಗಳು. ಅಂದಿನ ಸುರಪುರ ಅರಸರ ಕಾಲದ ತಿಮ್ಮಮ್ಮ, ರಂಗಮ್ಮ, ಸತ್ಯಮ್ಮ, ರುಕ್ಕಮ್ಮ ಎಂಬ ಮಹಿಳೆಯರ ಹೆಸರುಗಳೇ ಈ ಕಾಲದ ಅವರ ಹೆಸರಿನ ಈ ಹಳ್ಳಿಗಳೆಂಬುದು ಐತಿಹ್ಯ.

ಸಗರನಾಡು ಹೆಸರಿನ ಸುರಪುರ ಸೀಮೆಯಲ್ಲಿ ಕನ್ನಡ ಬಾರದಿರುವವರನ್ನು ಹುಡುಕಬಹುದು. ಆದರೆ ಉರ್ದು ಬಾರದಿರುವ ಕನ್ನಡಿಗರನ್ನು ಹುಡುಕುವುದು ಕಷ್ಟ. ಉರ್ದುವಿನ ಪಾರಮ್ಯ ಸುರಪುರ ಸೀಮೆಗೆ ಮಾತ್ರ ಸೀಮಿತವಲ್ಲ. ಬಹುಪಾಲು ಕಲ್ಯಾಣ ಕರ್ನಾಟಕ ಪರಿಸರದ ಭಾಷೆಯೇ ಅದಾಗಿದೆ. ಆದರೆ ಉರ್ದು ಎಂಬುದು ಮುಸ್ಲಿಮರ ಭಾಷೆಯೆಂದು ಕೆಲವರ ತಪ್ಪು ತಿಳಿವಳಿಕೆ. ನಮ್ಮ ನಡುವಿನ ಅನೇಕ ರಾಜಕಾರಣಿಗಳು ಉರ್ದುವಿನಲ್ಲಿ ನಿರರ್ಗಳವಾಗಿ ಮಾತಾಡುವುದಲ್ಲದೇ ಪರಿಣತಿ ಹೊಂದಿದವರು. ಶಾಂತರಸ, ಸಿದ್ದಯ್ಯ ಪುರಾಣಿಕ, ದತ್ತಾತ್ರೇಯ ಅವರಾದಿ, ಭೀಮಸೇನರಾವ್ ತವಗ, ಎ. ಕೃಷ್ಣ, ಪ್ರೊ. ಬಿ.ಆರ್. ಸುರಪುರ ಹೀಗೆ ಸಾಲು ಸಾಲು ಸಾಹಿತಿಗಳು ಉರ್ದುವಿನಲ್ಲಿ ಪ್ರಭುತ್ವ ಪಡೆದವರು.

ಸುರಪುರವು ಸ್ವಾತಂತ್ರ್ಯಯೋಧ, ಅರಸು ವೆಂಕಟಪ್ಪನಾಯಕರ ನಾಡು. ಅದು ಕಸುವುಭರಿತ ಮಸಬಿನ ನೆಲ. ಈಗೀಗ ಅಲ್ಲಿ ಕಲ್ಲುಗುಡ್ಡಗಳನ್ನೇ ಭೇದಿಸುತ್ತ ಮನೆ–ಮಳಿಗೆಗಳು ಹುಟ್ಟಿಕೊಳ್ಳುತ್ತಲಿವೆ. ತನ್ಮೂಲಕ ಗುಡ್ಡದಂಚಿನ ದೇವಳಗುಡ್ಡದ ಊರುಗಳ ಮೇಲಿನ ಸಾಂಸ್ಕೃತಿಕ ಆಕ್ರಮಣವೇ ಅದೆನಿಸಿದೆ. ನಾನೀಗ ಹೇಳಬೇಕಿರುವುದು ಸುರಪುರ ಸೀಮೆಯ ರಂಗಂಪೇಟೆ, ತಿಮ್ಮಾಪುರಗಳೆಂಬ ಕಳ್ಳುಬಳ್ಳಿಯಂಥ